
ನಕ್ಷತ್ರಪಟ

ಎಚ್. ಎಸ್. ವೆಂಕಟೇಶಮೂರ್ತಿ



# ಮಕ್ಕಳ ಪದ್ಯಗಳು

ಕಲೆ: ಸಂತೋಷ್ ಸಸಿಹಿತ್ಲು



1

ನನ್ನ ಕವಿತೇಲಿ ಸಾಲಾಗಿ ಕೂತಿದ್ದ
ಗುಬ್ಬಿಗಳೇನಾದವು?
ಕವಿತೆ ಪಾಡಿಗೆ ಕವಿತೆ ಬಿಟ್ಟು
ಬಾರ್ಡರ್ ಆಚೆಗೆ ಪಾರಾದವು!

2

ಆ ಊರಲ್ಲಿ ಮಕ್ಕಳೇ ಇರಲಿಲ್ಲ
ಆಟದ ಬಯಲ ತುಂಬ ಹುತ್ತ
ಪಂಜೆ, ಹೊಯಿಸಳ, ರಾಜರತ್ನಂ,
ಸಂಜೆ ಎಲ್ಲಿಗೆ ಹೋದರೂ ಯಾರಿಗೆ ಗೊತ್ತು?

3

ಕಿಂದರಜೋಗಿ ಓದಿ ಗೊತ್ತಾಗತ್ತೆ
ಕವಿತೆ ಒಂದು ಮ್ಯಾಜಿಕ್!
ಹಳ್ಳಿ ತುಂಬ ಮುದುಕ ಮುದುಕಿ
ಮಕ್ಕಳು? ಹೇಳಲಿಲ್ವ ಕವಿತೆ
ಒಂದು ಮ್ಯಾಜಿಕ್...

4

ಕೋಗಿಲೆ ಹಾಡೋದು ಮರೆತಿದೆ
ಹದ್ದು ಹಾರೋದು!
ಗಿಳಿ ಆಡೋದು ಮರೆತಿದೆ
ನವಿಲು ಕುಣಿಯೋದು!